**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.**

**ಓ.ಎಸ್.142/2025**

ಸಾಕ್ಷಿಯನ್ನು ದಿಃ **26-02-2026** ರಂದು ಕರೆಸಿ ಪ್ರಮಾಣವಚನ ಬೋದಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ **BBL** ವಕೀಲರಿಂದಃ-

ನಾನು ಈ ದಾವೆಯಲ್ಲಿ ವಾದಿ ಬ್ಯಾಂಕಿನ ಹಿರಿಯ ಶಾಖಾಧಿಕಾರಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ಸಂಗತಿಗಳೆಲ್ಲ ಸತ್ಯವಾಗಿದ್ದು ಸಹಿ ಮಾಡಿದ್ದೇನೆ.

ಸಾಲ ಕೋರಿ ಸಲ್ಲಿಸಿದ ಅರ್ಜಿಯನ್ನು ನಿಪಿ-1 ಎಂದು, ಸಾಲ ಮಂಜೂರಾತಿ ಪತ್ರವನ್ನು ನಿಪಿ-2 ಎಂದು , ದಿಃ 12.06.2017ರ ನೋಂದಾಯಿತ ಮೂಲ Mortgage Deed ನ್ನು ನಿಪಿ-3 ಎಂದು, Certificate of Loan Papersನ್ನು ನಿಪಿ-4 ಎಂದು, Loan agreement cum Hypothication Deedನ್ನು ನಿಪಿ-5 ಎಂದು, 5ನೇ ಪ್ರತಿವಾದಿ ಬರೆದುಕೊಡ್ಡ letter of guarantee ನ್ನು ನಿಪಿ-6 ಎಂದು, ಎರಡು letter of acknowledgment ಗಳನ್ನು ನಿಪಿ-7 ಮತ್ತು 8 ಎಂದು, ಸದರಿ ಸಾಲದ ಖಾತೆಗೆ ಸಂಬಂಧಿಸಿದ ಅಕೌಂಟ್ಸ್ ಸ್ಟೇಟ್ ಮೆಂಟ್ ನ್ನು ನಿಪಿ-09 ಎಂದು, ಪ್ರತಿವಾದಿಯರ ಸಾಲದ ಖಾತೆಗೆ ಸಂಬಂಧಪಟ್ಟಂತೆ Upgrade information ನ್ನು ನಿಪಿ-10 ಎಂದು, ಪ್ರತಿವಾದಿಯರ ಕುಟುಂಬದ ವಂಶವೃಕ್ಷದ ಬಗ್ಗೆ ಪ್ರಮಾಣ ಪತ್ರವನ್ನು ನಿಪಿ-11 ಎಂದು, ಮೂರು ಇ.ಸಿ ಗಳನ್ನು ನಿಪಿ-12 ರಿಂದ 14 ಎಂದು, ಚೆಕ್ಕುಬಂಧಿ ದೃಢೀಕರಣವನ್ನು ನಿಪಿ-15 ಎಂದು, ಕಂದಾಯ ಪಾವತಿಸಿದ ಬಗ್ಗೆ ದೃಢೀಕರಣ ಪತ್ರವನ್ನು ನಿಪಿ-16 ಎಂದು , NOC ಯನ್ನು ನಿಪಿ-17 ಎಂದು, ಎಂ ಆರ್ ನಂ.24/2003-04 ನ್ನು ನಿಪಿ-18 ಎಂದು, ಸರ್ವೆ ನಂ.15 ಮತ್ತು 3 ಕ್ಕೆ ಸಂಬಂಧಿಸಿದ 2 ಪಹಣಿಗಳನ್ನು ನಿಪಿ-19 ಮತ್ತು 20 ಎಂದು , ನಮ್ಮ ವಕೀಲರ ಮೂಲಕ ಪ್ರತಿವಾದಿಯರಿಗೆ ನೀಡಿದ ನೋಟೀಸಿನ ಕಛೇರಿ ಪ್ರತಿಯನ್ನು ನಿಪಿ-21 ಎಂದು, ಅದನ್ನು ಕಳುಹಿಸಿದ ಬಗ್ಗೆ 5 ಅಂಚೆ ರಶೀದಿಗಳನ್ನು ನಿಪಿ-22 ರಿಂದ 26 ಎಂದು, ಮೂರು ವಾಪಸ್ಸಾದ ಅಂಚೆ ಕವರ್ ಗಳನ್ನು ನಿಪಿ -27 ರಿಂದ ನಿಪಿ-29 ಎಂದು ಗುರುತಿಸಲಾಯಿತು. ನಿಪಿ-27 ರಿಂದ ನಿಪಿ-29 ನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಅದರೊಳಗಿರುವ ನೋಟೀಸನ್ನು ನಿಪಿ-27 ಎ

ಯಿಂದ 29 (ಎ) ಎಂದು ಗುರುತಿಸಲಾಯಿತು. ಸರ್ವೆ ನಂ.2 , 15 ಮತ್ತು 3 ಕ್ಕೆ ಸಂಬಂಧಿಸಿದ ಪಹಣಿಗಳನ್ನು ನಿಪಿ–30 ರಿಂದ ನಿಪಿ–32 ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಪ್ರತಿವಾದಿಯರ ಪರಃ**

ಪ್ರತಿವಾದಿಯರು ಏಕಪಕ್ಷಿಯರಾಗಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.